**ಓ ಎಸ್ ನಂಃ 206/2023**
**ಪಿ ಡಬ್ಲ್ಯೂ ಃ 1**

**ದಿಃ 31.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಜಿ ಹೆಚ್ ಎಂ ವಕೀಲರಿಂದಃ-**

ದಾವಾ ಸಲ್ಲಿಸುವ ಸಂದರ್ಭದಲ್ಲಿ ಪ್ರತಿವಾದಿ ಹೆಸರಿಗೆ ಸರ್ವೆ ನಂ. 12/1 ರಲ್ಲಿ ಎಷ್ಟು ವಿಸ್ತೀರ್ಣ ಜಮೀನು ಇತ್ತು ಎಂದರೆ ಸಾಕ್ಷಿಯು 34 ಗುಂಟೆ ಇತ್ತು ಎಂದು ನುಡಿಯುತ್ತಾರೆ. ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ಸರ್ವೆ ನಂ. 12/1 ರಲ್ಲಿ ಪ್ರತಿವಾದಿ ಹೆಸರಿನಲ್ಲಿ 14 ಗುಂಟೆ ಜಮೀನು ಇತ್ತು ಎಂದರೆ ಸರಿಯಲ್ಲ. ಸದರಿ ಸರ್ವೆ ನಂ. ನ 34 ಗುಂಟೆ ಪೈಕಿ 14 ಗುಂಟೆ ಯನ್ನು ಹೊರತು ಪಡಿಸಿ ಉಳಿಕೆ ಜಮೀನುಗಳಲ್ಲಿ ನಿವೇಶನಗಳನ್ನು ಮಾಡಿ ಬೇರೆ ವ್ಯಕ್ತಿಗಳಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನಿವೇಶನಗಳ ಬೆಲೆ ಕ್ರಯದ ಕರಾರು ಪತ್ರ ಆಗುವ ಸಮಯದಲ್ಲಿ ಒಂದು ನಿವೇಶನದ ಮಾರುಕಟ್ಟೆ ಬೆಲೆ ಸುಮಾರು ರೂ. 15,00,000/- ಇತ್ತು ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಮಾರುಕಟ್ಟೆ ಮೌಲ್ಯ ಸುಮಾರು ರೂ. 75,00,000/- ಇದೆ ಎಂದರೆ ನನಗೆ ಗೊತ್ತಿಲ್ಲ.

ಈ ದಾವೆಯನ್ನು ಹೂಡುವುದಕ್ಕಿಂತ ಮುಂಚೆ ಪ್ರತಿವಾದಿಗೆ ಲೀಗಲ್ ನೋಟಿಸ್ ಜಾರಿ ಮಾಡಿದ್ದೀರ ಎಂದರೆ ಸಾಕ್ಷಿ ಜಾರಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ನೋಟಿಸ್ ಗೆ ಪ್ರತಿವಾದಿ ಏನಾದರೂ ಜವಾಬನ್ನು ನೀಡಿದ್ದಾರ ಎಂದರೆ ನನಗೆ ಗೊತ್ತಿಲ್ಲ. ನನಗೆ ದೀಪು ಎಂಬುವವರು ಪರಿಚಯ ಇರುವುದಿಲ್ಲ. ತಮಗೆ ದೀಪು ಎಂಬುವವರು ಪರಿಚಯ ಇದ್ದಾರೆ ಎಂದರೆ ಸರಿಯಲ್ಲ. ತಾವು ಪ್ರತಿವಾಯಿಂದ ತಾವು ನೀಡಿರುವ ರೂ. 5,00,000/- ಹಣಕ್ಕೆ ಶೇಕಡಾ 5 ರ ಬಡ್ಡಿಯ ಹಣವನ್ನು ದೀಪು ರವರ ಖಾತೆಗೆ ಜಮಾ ಮಾಡಿಸಿಕೊಳ್ಳುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿಯ ಹೆಂಡತಿಯ ಬ್ಯಾಂಕ್ ಖಾತೆಗೆ ಸೇರಿದ 2 ಖಾಲಿ ಚೆಕ್ಕುಗಳನ್ನು ತಮಗೆ ಪ್ರತಿವಾದಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 1 ರ ಕ್ರಯದ ಕರಾರು ಪತ್ರವನ್ನು ಪ್ರತಿವಾದಿಯು ಸಾಲದ ಭದ್ರತೆಗಾಗಿ ತಮಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಹಲವಾರು ಬಾರಿ ಪ್ರತಿವಾದಿಯು ಅವರು ನಿಮ್ಮಿಂದ ಪಡೆದಿರುವ ಸಾಲದ ಹಣವನ್ನು ಹಿಂತಿರುಗಿಸಲು ತಯಾರಿರುತ್ತಾರೆ ಆದರೂ ಸಹ ತಾವು ಪ್ರತಿವಾದಿಯಿಂದ ಹಣವನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ತಾವು ಹಾಜರುಪಡಿಸಿರುವ ಎಲ್ಲಾ ದಾಖಲಾತಿಗಳು ಈ ದಾವೆಗೋಸ್ಕರ ಸೃಷ್ಟಿ ಮಾಡಿಕೊಂಡಿದ್ದೀರಿ

ಎಂದರೆ ಸರಿಯಲ್ಲ. ತಾವು ಪ್ರತಿವಾದಿಗೆ ಸೇರಿದ ಆಸ್ತಿಯನ್ನು ಕಬಳಿಸಬೇಕು ಎಂಬ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**